ಇ) ಈ ಯೋಜನೆಯಡಿ ಬಿಡುಗಡೆಯಾದ ಹಣವೆಷ್ಟು? ಮತ್ತು ಈ ಕಾಮಗಾರಿಗಳನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಮೀರಾಜುದ್ದೀನ್ ಎನ್ ಪಟೇಲ್ (ಪೌರಾಡಳಿತ ರಾಜ್ಯ ಸಚಿವರು)

ಅ) ರಾಜ್ಯ ಹಣಕಾಸು ಆಯೋಗದಡಿ :

1997-98ನೇ ಸಾಲಿಗೆ	-	ರೂ. 3.20 ಕೋಟಿ
1998-99ನೇ ಸಾಲಿಗೆ (ಫೆಬ್ರವರಿ 99ರ ಅಂತ್ಯಕ್ಕೆ)	-	ರೂ. 9.96 ಕೋಟಿ

ಹತ್ತನೇ ಹಣಕಾಸು ಆಯೋಗದಡಿ

1997-98ನೇ ಸಾಲಿಗೆ	-	ರೂ. 36.00 ಲಕ್ಷ
1998-99ನೇ ಸಾಲಿಗೆ	-	ರೂ. 64.50 ಲಕ್ಷ

ಆ) ಈ ಯೋಜನೆಯಡಿ ಕೈಗೆತ್ತಿಕೊಳ್ಳಲಾಗುವ ಕಾಮಗಾರಿಗಳನ್ನು ಗುರುತಿಸಲಾಗಿರುತ್ತದೆ. ಈ ಬಗ್ಗೆ ಭಾರತ ಸರ್ಕಾರ, ರಾಜ್ಯ ಸರ್ಕಾರ ಹಾಗೂ ಎಡಿಬಿ ಯೊಡನೆ ಸಾಲದ ಒಡಂಬಡಿಕೆಯಾಗಿರುವುದಿಲ್ಲ. ಅಕ್ಟೋಬರ್ 99 ರಷ್ಟರಲ್ಲಿ ಸಾಲ ಒಡಂಬಡಿಕೆ ಸಹಿಯಾಗಿ ಯೋಜನೆ ಜಾರಿಗೆ ಬರುವ ಅಂದಾಜು ಮಾಡಲಾಗಿದೆ. ಅನಂತರ ಅನುಮೋದಿತ ಕಾರ್ಯಕ್ರಮದಂತೆ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಇ) ಎಡಿಬಿ ಯೋಜನೆಯಡಿಯಲ್ಲಿ ಇನ್ನೂ ಹಣ ಬಿಡುಗಡೆಯಾಗಿರುವುದಿಲ್ಲ. ಅಕ್ಟೋಬರ್ 99 ರಷ್ಟರಲ್ಲಿ ಸಾಲ ಒಡಂಬಡಿಕೆಯು ಜಾರಿಯಾಗಬಹುದೆಂದು ಅಂದಾಜು ಮಾಡಲಾಗಿದೆ. ಅನಂತರ ಅನುಮೋದಿತ ಕಾರ್ಯಕ್ರಮದಂತೆ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಗೆ ಹೊಸದಾಗಿ ಸೇರಿಸಲಾದ ಕಂದಾಯ ಪ್ರದೇಶಗಳು.

828(1221) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಗೆ ಹೊಸದಾಗಿ ಸೇರಿಸಿಕೊಳ್ಳಲಾದ ಕಂದಾಯ ಪ್ರದೇಶಗಳೆಷ್ಟು ಸದರಿ ಪ್ರದೇಶಗಳಲ್ಲಿರುವ ನಿವೇಶನಗಳು ಮತ್ತು ಮನೆಗಳ ಸಂಖ್ಯೆ ಎಷ್ಟು ;

ಅ) ಈ ಮನೆಗಳಿಗೆ ಮಹಾನಗರ ಸಭೆ ಖಾತಾ ನೀಡಲು ನಿರ್ಧರಿಸಿದೆಯೇ ಹಾಗಿದ್ದಲ್ಲಿ ಇಲ್ಲಿಯವರೆಗೆ ಖಾತಾ ಪಡೆದವರ ಸಂಖ್ಯೆ ಎಷ್ಟು; ಖಾತಾ ಪಡೆಯದೆ ಇರುವವರ ಸಂಖ್ಯೆ ಎಷ್ಟು; ಉಳಿದ ನಿವೇಶನದಾರರಿಗೆ ಖಾತಾ ನೀಡಲು ಕೈಕೊಳ್ಳಲು ಉದ್ದೇಶಿಸಿರುವ ಕ್ರಮಗಳೇನು?

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :—

ಅ)	ಕಂದಾಯ ಪ್ರದೇಶ	-	4
	ನಿವೇಶನಗಳ ಸಂಖ್ಯೆ	-	1308
	ಮನೆಗಳ ಸಂಖ್ಯೆ	-	1357

ಅ) ಈ ಮನೆಗಳಿಗೆ ಈಗಾಗಲೇ ಖಾತಾ ನೀಡಿರುತ್ತದೆ. ಇಲ್ಲಿಯವರೆಗೆ ಖಾತಾ ಪಡೆದವರ ಸಂಖ್ಯೆ : 2665 ಇರುತ್ತದೆ. ಈ ಗ್ರಾಮಗಳ ಪಂಚಾಯತಿ ರಿಜಿಸ್ಟರ್‌ನಲ್ಲಿದ್ದ ಎಲ್ಲಾ ಖಾತೆಗಳನ್ನು ಕೆ.ಎಂ.ಸಿ. ಕಾಯ್ದೆ 1976 ಕಲಂ 4(4)ರ ಮೇರೆಗೆ ಮಹಾನಗರ ಪಾಲಿಕೆ ಕರಾಕರಣಿ ರಿಜಿಸ್ಟರಲ್ಲಿದ್ದ ದಾಖಲು ಮಾಡಿರುತ್ತದೆ. ತದನಂತರ ಕೆ.ಎಂ.ಸಿ. ಕಾಯ್ದೆ 1976 ಕಲಂ 114 ರ ಮೇರೆಗೆ ನಿಗಧಿತ ನಮೂನಾದಲ್ಲಿ ಅಧಿಕೃತ ದಾಖಲೆಗಳೊಂದಿಗೆ ಅರ್ಜಿಕೊಟ್ಟ ಪ್ರಕರಣಗಳಲ್ಲಿ ರಿಜಿಸ್ಟರದಲ್ಲಿ ದಾಖಲೆ ಮಾಡಿ ಖಾತಾ ನೀಡಲಾಗುತ್ತದೆ. ಹೀಗೆ ಅರ್ಜಿ ಕೊಟ್ಟ ಖಾತಾ ಪಡೆಯದ ಯಾವುದೇ ಪ್ರಕರಣಗಳು ಬಾಕಿ ಇರುವುದಿಲ್ಲ.

ಕೆ.ಎಂ.ಸಿ. ಕಾಯ್ದೆ 1976 ಕಲಂ 114ರ ಮೇರೆಗೆ ನಿಗಧಿತ ನಮೂನಾದಲ್ಲಿ ಅಧಿಕೃತ ದಾಖಲೆಗಳೊಂದಿಗೆ ಅರ್ಜಿ ಕೊಟ್ಟಲ್ಲಿ ಕರಾಕರಣಿ ರಿಜಿಸ್ಟರ್‌ದಲ್ಲಿ ಖಾತಾ ದಾಖಲು ಮಾಡಲು ಕ್ರಮ ಕೈಕೊಳ್ಳಲಾಗುವುದು.

ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯ ಉದ್ಯಾನವನಗಳು.

829(1222) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಣ) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯ ಸರಹದ್ದಿನಲ್ಲಿರತಕ್ಕ ಉದ್ಯಾನವನಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಎಷ್ಟು ಉದ್ಯಾನವನಗಳನ್ನು ಮಹಾನಗರಸಭೆ ನಿರ್ವಹಣೆ ಮಾಡುತ್ತಿದೆ; ಮಹಾನಗರದ ಪ್ರಮುಖ ಉದ್ಯಾನವನಗಳ ನಿರ್ವಹಣೆಗೆ ಹಾಗೂ ಅಭಿವೃದ್ಧಿಗೆ ಸರ್ಕಾರವು ಏನಾದರೂ ಯೋಜನೆಗಳನ್ನು ಹಾಕಿಕೊಂಡಿದೆಯೇ?

ಅ) ಮಹಾನಗರದಲ್ಲಿ ಹೊಸದಾಗಿ ಅಸ್ಥಿತ್ವಕ್ಕೆ ಬಂದ ವಸತಿ ಬಡಾವಣೆಗಳಲ್ಲಿನ ಉದ್ಯಾನವನಗಳ ಸ್ಥಳವನ್ನು ನಿರ್ವಹಣೆಯ ಸಲುವಾಗಿ ಖಾಸಗಿ ಸಂಘ ಸಂಸ್ಥೆಗಳಿಗೆ